## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಒದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

‘ಬಿಸಿ ನೀರ ಹನ್ನೆಡ್ಡಾ ಕೊಡ ಮಾಡಿ;
ಬಣ್ಣದ ಖೌದಿ ಮರಿ ಮಾಡಿ
ಜೋಕುಮಾರ.
ಬಣ್ಣದ ಖೌದಿ ಮರಿ ಮಾಡಿ ಸಿರಿ
ಮಣಿಕೆವ್ವ;
ರಗದ ಮಗನ ಹಡದಾಳೆ
ಜೋಕುಮಾರ.
ರಗದ ಮಗನ ಹಡದಾಳೆ ಸಿರಿ ಮಣಿಕೆವ್ವ;
ಹುಟ್ಟಿದ ಯ್ಯಾಳಿ ಕಡಲ್ಯಾಸ ಜೋಕುಮಾರ’.

ಹಿಂಗ ಹಾಡ್ಕೋತಾ ತಿರಗ್ತೀದೇವು. ನಮ್ಮವ್ವ ಹುಡ್ಕೋತ ಬಂದು ಸಾಲಿ ಯಾಳಿ ಆಗ್ಯಾದಂತ ಬೈಯ್ದು ಕರಕೊಂಡು ಹೊಯ್ಯತೀಳು.

ಹರ್ ಅಮಾಸಿ ಹುಣ್ಣಿಗಿ ಆಕುಳ್ ಇದ್ದೋರ್ ಮನೀಗಿ ಹೋಗಿ ಹೆಂಡಿ ತಂದು ಮನಿ ಸಾರ್ಸಿ, ಯಾರ್ ರಂಗೋಲಿ ಚಂದ ಹಾಕ್ತಾರಂತ ಹಾಕ್ತೀದೇವು. ಒಮ್ಮೊಮ್ಮ ಹೊಟ್ಟೆಕಿಚ್ಚು ಬಿದ್ದು ಹಾಕಿದ ರಂಗೊಲಿ ಕಾಲೀಲಿ ಕೆಡ್ಸಿ ಜಗಡಾಬಿ ಆಡ್ತಿದೇವು. ಮದಿ ಮುಂಜಿ, ತೊಟ್ಟುಲ್, ಬಟ್ಟುಲ್, ಮೈನೆರ್ದಲ್ಲಿ ಎಲ್ಲ ಕಡಿ ಹೊಯ್ತಿದೇವು.

‘ಜಿನಿ ಜಿನಿ ಮಳಿ ಬಿದ್ದು ಕಲ್ಲೆಲ್ಲ ಹಸನಾಗಿ ಕಲ್ಲಾಗಿನ ಕವಳಿ ಬೆಳದಾವೆ ಕೋಲೆ’ ಅಂಬಾ ಹಾಡಾ ಮತ್ ‘ಊರ ಮುಂದಿನ ಬೇಲಿ ಬೇಲಿಗಿ ಹಾಕ್ಯಾರೆ ಕೀಲಿ ನಮ್ಮ ಗೌರವ್ವ ಇಟ್ಟಾಳೆ ವಾಲಿ ಕೋಲ ಮುತ್ತಿನ ಕೋಲೆ.’ ಅಂತ ಗೌರಿ ಹಬ್ಬದಾಗ; ತಲೀಗಿ ತಲಿ ಹಚ್ಚಿ ಕುಂತು ಹಿರಿ ಮುದುಕೇರ್ ಅಪ್ಲೆ ಹಾಡ್ತಿದೇವು.

ನಾವಿಬ್ಬರು ದೊಡ್ಡೋರ್ ಸಂಗಾಟ ಇರಾ ಸಲ್ಯಾಂದು; ಇವು ಎಡ್ಡು ‘ಹಿರೇರ್ ಕುಂಡ್ಯಾನ್ ನರ ಆಗ್ಯಾವ’ ಅಂತ ಬೈತೀರು.

ಈಸ್ ದಿಂಧ್ ಬಾದ್ ಸುನಿ ಧನಿ ಕೇಳ್ತಿಕಿ ತಡಾ ಪೂರಾ ಬಚಪನ್ ಕಣ್ಮುಂದ ಬಂದಪ್ಲೇ ಆಯ್ತು.

ನಿದ್ದಿ ಎಕಾಡಿ ಹೊಯ್ತೋ ಏನೋ? ಫೂರಾ ಜೋಶ್ ಬಂದಂಗಾಗಿ ಸೋಳಾ ವರ್ಷಿನ್ ಪೋರಿ ಆದಂಗಾದ ನಾ. ಅಕಿಗಿಬಿ ಖುಷಿ ಬಕ್ಕೋಳ್ ಆಗಿತ್ತು.

‘ಏಯ್ ಪಾರಿ ನಿಂಗ ನೆಂಪ್ ಅದಾ ಏನ್ಗಾ? ಫರ್ಬಾತ್ ಫೇರಿ ದಿನ ಯಾವ್ದೋ ಮಾತೀಗಿ ಜಗಡಾ ಆಡಿದೇವ್ ನೋಡ್. ಅಗೋತ ನೀ ನನ್ನ ಝಿಂಜಿ ಹಿಡ್ದು ಕೂದುಲೇ ಕಿತ್ತಿದ್ದಿ. ಜರೀನಿ ನಮ್ ಝುಗಡಾ ಬಿಡ್ಸಲಾಕ್ ಅಡ್ ಬಂದು ಮೊಸ್ಡಿ ಒಡ್ಕೊಂಡಿತ್ತು ನೋಡು. ಅಂತಂದು ನಕ್ಕುಳು. ನಾಬಿ ನಕ್ಕ.

ಖರೇಬಿ ಪಾಪ್. ಜರೀನಿಗಿಬಿ ಮೂರು ಮಕ್ಕುಳ್ ಆಗ್ಯಾವಂತೀಗ. ಮನ್ನ ಅವರಣ್ಣ ಸಿಕ್ಕಾಗ ಅಲ್ಲಾತೀನು. ಸಣ್ಣೌರ್ ಇದ್ದಾಗಿಂದು ಮಜಾನೇ ಬ್ಯಾರೆ ಇರ್ತದಗಾ. ಏಸ್ಯಾಳಿ ಕಟ್ಟಿ–ದೋ ಮಾಡಿದೇವ್ಲೋ ಏನೋ? ಲೆಕ್ಕನೇ ಇಲ್ಲ.

ಆ ಮಾಣಿಕಪ್ಪನ ಹೊಲ್ಕ್ ಚೇಕ್ ತಿಲ್ಲಾಕ್ ಹೋಗಿ, ಒಂದೊಂದ್ ಚರ್ಗಿ ಖಬ್ಬಿನ ಹಾಲು ಕುಡಿತಿದೇವ್. ಬಸವ ಜಯಂತೀಗಿ ಬೇಲಿ ಮ್ಯಾಗೀನ ಬಸವಣ್ಣಗ ನೆವದ್ಯಾ ತೋರ್ಸಿ ಬರಾ ಮುಂದ ಅಂಬ್ರ್ಯಾದಾಗಿಂದು ಮಾನಾಕಾಯಿ ಕದ್ಕೊಂಡು ಬರ್ತಿದೇವ್ ನೆಂಪ ಅದಾ?

ಪಂಚಮಿ ಹಬ್ಬದಾಗರಾ ಏಟ್ ಮಜಾ ಮಾಡ್ತೀದೇವು. ಅಳ್ಳಿಟ್ಟು ಅಳ್ಳು ತಿನ್ಕೋತಾ, ಒಬ್ಬರ್ ಮಾರಿಮ್ಯಾಗ ಒಬ್ಬುರು ಊಬಿ ಮಾರಿ ಎಲ್ಲಾ ಬುರ್ ಬುರ್ ಪೋಚಮ್ಮನಪ್ಲೇ ಮಾಡ್ಕೋತೀದೇವು.

ಸಣ್ಣಾಗಿನ್ ಮಾತು ಈಗ ರೊಕ್ಕ ಕೊಟ್ಟ್ರೂಬಿ ಸಿಗಲ್ಲ ನೋಡು. ಹಂಗೇ ಇರಾದಿತ್ತ ಅನ್ಸತದ.

ಶಾಂತಕ್ಕ ಬೊಮ್ಮಗೊಂಡೇಶ್ವರ ದೇವರ್ ಗುಡಿಗಿ ಒಯ್ತೀಳು. ಗುಡಿ ಮುಂದ್ ಯಾರೋ ಇಟ್ಟ ಹೋದ ಸಕ್ರಿ ಗುಂತಿ ತಕ್ಕೊಂಡು; ದೇವರ್ ಪರ್ಸಾದ್ ಅದಾ ತಿನ್ರಿ ಅಂತ ಎಡ್ಡಡ್ಡೇ ಕಾಳ್ ಸಕ್ರಿ ಕೈಯ್ದಾಗ ಇಡ್ತೀಳು. ನಾವು ಅದೀಟೇ ಕಪ್ಪಿ ನಾಲ್ಗಿ ಹೊರಗ ತೆಗ್ದಪ್ಲೆ ತೆಗ್ದು; ಸಕ್ರೀ ಕಾಳ್ ಒಳಗ ಎಳ್ಕೊತಿದೇವು. ಹೊಸ ಹೊಸ ಮದಿ ಆದಾಗ ಎಲ್ಲರೂ ತೌರ್ ಮನೀಗಿ ಬರ್ತೀರು. ಪಂಚಮಿ ಹಬ್ಬ, ಹಬ್ಬ ಅನ್ಸತಿತ್ತು. ಹೊಸ ಅರ್ಬಿ ಉಟ್ಕೊಂಡು ನಾಗಪ್ಪನ ಗುಡಿಗಿ ಹೋಗಾ ಮುಂದ್ ಅಳ್ಳ ಚೆಲ್ಕೋತ ಹೋಗಿ ಹಾಲೆರ್ದು ಬರ್ತಿದೇವು. ಧೊಡ್


ಬೀದರ್‌ನಲ್ಲಿರುವ ಗುರುದ್ವಾರ